ತೆಂಗಿನ ಮಿಡಿಗಾಯಿ ಉದುರುವಿಕೆ

ಕೊಕೋಸ್ ನ್ಯೂಸಿಫೆರಾ ಎನ್ನುವ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ತೆಂಗು ಭಾರತದಲ್ಲಿ ಸುಮಾರು 10 ದಶಲಕ್ಷಕ್ಕೂ ಮೇಲ್ಪಟ್ಟ ಕುಟುಂಬಗಳಿಗೆ ಜೀವನೋಪಾಯವನ್ನು ಒದಗಿಸಿಕೊಟ್ಟಿದೆ. ತೆಂಗಿನ ಪ್ರತಿಯೊಂದು ಭಾಗವು ಮಾನವನ ದೈನಂದಿನ ಕಾರ್ಯಗಳಲ್ಲಿ ಉಪಯೋಗಿಸಲ್ಪಡುವುದರಿಂದ ಇದನ್ನು ಕಲ್ಪವೃಕ್ಷ ಎಂದು ಕರೆಯುತ್ತಾರೆ. ಬಹುವಾರ್ಷಿಕ ಬೆಳೆಯಾದ ತೆಂಗನ್ನು ಬೆಳೆಯುವಲ್ಲಿ ರೈತರು ಅನೇಕ ಅಡತಡೆಗಳನ್ನು ಎದುರಿಸುತ್ತಾರೆ. ಅವುಗಳಲ್ಲಿ ಮಿಡಿಗಾಯಿ ಉದುರುವುದು ಪ್ರಮುಖ ಸಮಸ್ಯೆಯಾಗಿದ್ದು, ರೈತರು ಇದಕ್ಕೆ ಪರಿಹಾರ ಅರಸುವಂತಾಗಿದೆ. ಮಿಡಿಗಾಯಿ ಮತ್ತು ಸಣ್ಣ ಗಾತ್ರದ ತೆಂಗಿನ ಕಾಯಿಗಳ ಅಸಹಜ ಉದುರುವಿಕೆಯಿಂದ ತೆಂಗಿನ ಕೃಷಿಯ ಇಳುವರಿಯಲ್ಲಿ ಸಾಕಷ್ಟು ನಷ್ಟವಾಗುವುದು ಕಂಡು ಬಂದಿದೆ. ಸಣ್ಣ ಗಾತ್ರದ ಮತ್ತು ಪರಾಗಸ್ಪರ್ಶ ಕ್ರಿಯೆಗೆ ಒಳಪಡದ ಹೆಣ್ಣು ಹೂವುಗಳು ಗಿಡದಿಂದ ಬೀಳುವುದನ್ನು ಮಿಡಿಗಾಯಿ ಉದುರುವುದು ಎಂದು ಕರೆಯುತ್ತಾರೆ. ಈ ತರಹದ ಮಿಡಿಗಾಯಿ ಉದುರುವುದು ತೆಂಗಿನ ಕೃಷಿಯಲ್ಲಿ ಸರ್ವೇಸಾಮಾನ್ಯವಾಗಿ ಕಂಡು ಬರುತ್ತದೆ. ಸಾಮಾನ್ಯವಾಗಿ 50-60 ಪ್ರತಿಶತ ಹೆಣ್ಣು ಹೂವುಗಳು ಉದುರುತ್ತವೆ. ಆದರೆ ಬೇಸಿಗೆ ಕಾಲದಲ್ಲಿ ಈ ತರಹದ ಸ್ಥಿತಿ ಶೇಕಡಾ 70 ರಷ್ಟು ಸಹ ಆಗಿರುತ್ತದೆ. ಶೇಕಡಾ 60-70 ಕ್ಕಿಂತ ಹೆಚ್ಚು ಮಿಡಿಗಾಯಿಗಳು ಉದುರಿದಲ್ಲಿ, ಅದು ತೆಂಗಿನ ಇಳುವರಿಯಲ್ಲಿ ಹೆಚ್ಚಿನ ಕಡಿತವನ್ನುಂಟುಮಾಡುತ್ತವೆ. ಈ ತರಹದ ಮಿಡಿಗಾಯಿ ಉದುರುವುದಕ್ಕೆ ಅನೇಕ ಕಾರಣಗಳಿದ್ದರೂ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪೋಷಕಾಂಶಗಳ ಕೊರತೆ, ಅನುವಂಶಿಕ, ಮಣ್ಣಿನ ಗುಣಧರ್ಮ, ನೀರಿನ ಕೊರತೆ ಅಸಮರ್ಪಕ ಪರಾಗಸ್ಪರ್ಶ, ಸಸ್ಯ ಪ್ರಚೋದಕಗಳ ಕೊರತೆ, ಕೀಟ ಮತ್ತು ರೋಗಗಳ ಬಾಧೆ ಇತ್ಯಾದಿ.

1. ಪೋಷಕಾಂಶಗಳ ಕೊರತೆ

ಒಂದು ತೆಂಗಿನ ಗಿಡ ಒಂದು ವರ್ಷದಲ್ಲಿ 540 ಗ್ರಾಂ. ಸಾರಜನಕ, 260 ಗ್ರಾಂ. ರಂಜಕ ಮತ್ತು 820 ಗ್ರಾಂ ಪೋಟ್ಯಾಷಿಯಂ ಅನ್ನು ಮಣ್ಣಿನಿಂದ ಹೀರುತ್ತದೆ. ಇದನ್ನು ನಿಭಾಯಿಸಲು ಪ್ರತಿ ಗಿಡಕ್ಕೆ ವರ್ಷಕ್ಕೆ 1.3 ಕೆ.ಜಿ. ಯುರಿಯಾ, 2.0 ಕೆ.ಜಿ ಸೂಪರ್ ಫಾಸ್ಫೇಟ್ ಮತ್ತು 2.0 ಕೆ.ಜಿ. ಪೊಟ್ಯಾಷ್ ಮತ್ತು 50.0 ಕೆ.ಜಿ ಯಷ್ಟು ಕೊಟ್ಟಿಗೆ ಗೊಬ್ಬರವನ್ನು ಕೊಡಬೇಕು. ಇದರೊಂದಿಗೆ ಒಂದು ಕೆ.ಜಿ ಯಷ್ಟು ಹೆಚ್ಚಿನ ಪೊಟ್ಯಾಷ್ ಮತ್ತು 50.0 ಕೆ.ಜಿ ಯಷ್ಟು ಕೊಟ್ಟಿಗೆ ಗೊಬ್ಬರನ್ನು ಕೊಡಬೇಕು. ಇದರೊಂದಿಗೆ ಒಂದು ಕೆ.ಜಿ ಯಷ್ಟು ಹೆಚ್ಚಿನ ಪೊಟ್ಯಾಷ್‌ನ್ನು ಪ್ರತಿ ಗಿಡಕ್ಕೆ ಬಳಸುವುದರಿಂದ ಮಿಡಿಗಾಯಿ ಉದುರುವುದನ್ನು ತಡೆಗಟ್ಟಬಹುದು. ಪ್ರತಿ ಗಿಡಕ್ಕೆ ಪ್ರತಿ ವರ್ಷ ಒಂದು ಕಿ.ಗ್ರಾಂ ಲಘು ಪೋಷಕಾಂಶಗಳ ಮಿಶ್ರಣ ಮತ್ತು 200 ಗ್ರಾಂ ಸತುವಿನ ಸಲ್ಫೇಟ್ ಹಾಕುವುದರಿಂದ ಉತ್ತಮ ಫಲಿತಾಂಶ ಕಂಡು ಬಂದಿದೆ (ರಸಗೊಬ್ಬರಗಳನ್ನು ಎರಡು ಸಮ ಕಂತುಗಳಲ್ಲಿ ಮೇ-ಜೂನ್ ಮತ್ತು ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಕೊಡಬೇಕು).

2. ಅನುವಂಶಿಕ ಕಾರಣಗಳು

ತಾಯಿ ಗಿಡದ ಅನುವಂಶಿಕ ಲಕ್ಷಣ ಮಿಡಿಗಾಯಿ ಉದುರುವಿಕೆಗೆ ಪ್ರಮುಖ ಕಾರಣವಾಗಿದ್ದು, ಕೆಲವು ಸಾರಿ ಉತ್ತಮವಾಗಿ ನಿರ್ವಹಣೆ ಮಾಡಿದ ತೆಂಗಿನ ತೋಟದಲ್ಲಿಯೂ ಸಹ ಹೆಚ್ಚು ಮಿಡಿಗಾಯಿ ಉದುರುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಕಡಿಮೆ ಇಳುವರಿ ಮತ್ತು ಕಡಿಮೆ ಕಾಯಿ ಕಚ್ಚುವಿಕೆಯ ಸಾಮರ್ಥ್ಯದ ತಾಯಿಗಿಡಗಳು, ಆದುದರಿಂದ ಸಸಿಗಳನ್ನು ತಯಾರಿಸುವಾಗ ಉತ್ತಮ ಇಳುವರಿ ಮತ್ತು ಹೆಚ್ಚು ಕಾಯಿ ಕಚ್ಚುವಿಕೆಯ ಲಕ್ಷಣ ಹೊಂದಿದ ತಾಯಿಗಿಡಗಳಿಂದಲೇ ಕಾಯಿಗಳನ್ನು ಉಪಯೋಗಿಸಬೇಕು.

3. ಮಣ್ಣಿನ ಗುಣಧರ್ಮ

ಮಣ್ಣಿನ ರಸಸಾರ 5.5-8.0 ಇರುವಲ್ಲಿ ತೆಂಗಿನ ಉತ್ತಮ ಇಳುವರಿಯನ್ನು ಪಡೆಯಬಹುದು. ಈ ರಸಸಾರ ವ್ಯಾಪ್ತಿಯ ಆಚೆ ಇರುವ ಭೂಮಿಗಳಲ್ಲಿ ತೆಂಗನ್ನು ಬೆಳೆದಾಗ ಹೆಚ್ಚಿನ ಮಿಡಿಗಾಯಿ ಉದುರುವುದನ್ನು ಕಾಣಬಹುದು. ಆಮ್ಲಯುಕ್ತ ಮಣ್ಣನ್ನು

ಸುಧಾರಿಸಲು ಪ್ರತಿ ಗಿಡಕ್ಕೆ 2 ಕೆ.ಜಿ ಸುಣ್ಣ ಹಾಕುವುದು. ಹಾಗೆಯೇ ಕ್ಷಾರಗುಣವುಳ್ಳ ಭೂಮಿಯಲ್ಲಿ ಪ್ರತಿ ತೆಂಗಿನ ಗಿಡಕ್ಕೆ 4 ಕೆ.ಜಿ. ಯಷ್ಟು ಜಿಪ್ಸಮ್ ಹಾಕುವುದರಿಂದ ಉತ್ತಮ ಫಲಿತಾಂಶ ಸಾಧ್ಯ. ತೆಂಗನ್ನು ಕಲ್ಲು ಮಿಶ್ರಿತ ಮಣ್ಣು ಅಥವಾ ಹೆಚ್ಚು ಗಟ್ಟಿಯಾದ ಭೂಮಿಯಲ್ಲಿ ಬೆಳೆಯುವುದರಿಂದ ಅಧಿಕ ಮಿಡಿಗಾಯಿ ಉದುರುವುದನ್ನು ಕಾಣಬಹುದು. ಗಿಡಗಳಿಗೆ ಹಸಿರೆಲೆ ಗೊಬ್ಬರ ಅಥವಾ ಕೊಟ್ಟಿಗೆ ಗೊಬ್ಬರ ಹಾಕುವುದರಿಂದ ಮಿಡಿಗಾಯಿ ಉದುರುವುದನ್ನು ನಿಯಂತ್ರಣದಲ್ಲಿಡಬಹುದು.

4. ನೀರಿನ ಕೊರತೆ ಮತ್ತು ಮಿತಿ ಮೀರಿದ ನೀರಾವರಿ

ತೆಂಗಿನ ಗಿಡಕ್ಕೆ ಪ್ರತಿನಿತ್ಯ 45 - 50 ಲೀಟರ್ ನೀರಿನ ಅವಶ್ಯಕತೆಯಿರುತ್ತದೆ. ಬೇಸಿಗೆ ಕಾಲದಲ್ಲಿ ಗಿಡಗಳಿಗೆ ನೀರನ್ನು ಒದಗಿಸುವುದು ಅತ್ಯಂತ ಅವಶ್ಯಕವಾಗಿರುತ್ತದೆ. ಅಧಿಕ ಅವಧಿಯವರೆಗೆ ತೆಂಗಿನ ಗಿಡಗಳು ನೀರಿನ ಕೊರತೆಗೆ ಒಳಪಟ್ಟಲ್ಲಿ ಮಿಡಿಗಾಯಿ ಉದುರುವುದನ್ನು ಕಾಣಬಹುದು. ಮಣ್ಣಿನಲ್ಲಿನ ನೀರಿನ ಅಂಶ ಮತ್ತು ಉಷ್ಣತಾಮಾನ ಒಮ್ಮೆಲೇ ಏರುಪೇರಾಗುವುದರಿಂದ ಮಿಡಿಗಾಯಿ ಮತ್ತು ಸಣ್ಣ ಗಾತ್ರದ ಕಾಯಿಗಳ ಉದುರುವಿಕೆ ಹೆಚ್ಚಾಗುವುದು ಕಂಡು ಬಂದಿದೆ. ಒಣ ಬೇಸಾಯ ಪದ್ಧತಿಯಲ್ಲಿ ನೀರಿನ ಕೊರತೆಯನ್ನು ತಡೆದುಕೊಳ್ಳಲು ಕೆಲವೊಂದು ಸೂಕ್ತ ಕ್ರಮಗಳನ್ನು ಅನುಸರಿಸುವುದು ಉತ್ತಮ. ಇದಕ್ಕಾಗಿ ಎರಡು ತೆಂಗಿನ ಗಿಡಗಳ ಸಾಲುಗಳ ಮಧ್ಯೆ 6 ಮಿ. X 1.5 ಮೀ X 45 ಸೆಂ.ಮೀ. ಆಳತೆಯ ಕಾಲುವೆ ತೋಡಿ ಅದರಲ್ಲಿ ತೆಂಗಿನ ಸಿಪ್ಪೆ ತುಂಬಿ ಮುಚ್ಚಬೇಕು ಮತ್ತು ತೆಂಗಿನ ಗಿಡದ ಬುಡವನ್ನು ನಾರಿನ ಹುಡಿ ಅಥವಾ ತೆಂಗಿನ ಎಲೆಗಳಿಂದ ಹೊದಿಸಬೇಕು. ನೀರಿನ ಕೊರತೆ ಮಾತ್ರವಲ್ಲದೇ, ನೀರು ನಿಲ್ಲುವುದರಿಂದಲೂ ಸಹ ಗಿಡಗಳಿಗೆ ಹಾನಿಯಾಗುವುದು ಕಂಡು ಬಂದಿದೆ. ನೀರು ಸರಾಗವಾಗಿ ಹರಿದು ಹೋಗಲು ಬಸಿಕಾಲುವೆಗಳ ವ್ಯವಸ್ಥೆ ಇಲ್ಲದಿದ್ದಲ್ಲಿ ಅದರಿಂದ ಬೇರುಗಳಿಗೆ ಉಸಿರಾಟದ ತೊಂದರೆಯಾಗುತ್ತದೆ. ಈ ಪರಿಸ್ಥಿತಿಯಲ್ಲಿ ಮಣ್ಣಿನಲ್ಲಿ ಉಂಟಾಗುವ ಕೆಲವು ರಾಸಾಯನಿಕ ಕ್ರಿಯೆಗಳಿಂದ ಪೋಷಕಾಂಶಗಳ ಹೀರುವಿಕೆ ಕಡಿಮೆಯಾಗಿ ಇಂತಹ ಪರಿಸ್ಥಿತಿಯಲ್ಲಿ ಮಿಡಿಗಾಯಿ ಉದುರುವುದನ್ನು ತಡೆಯಲು ಮತ್ತು ಉತ್ತಮ ಗಿಡಗಳ ಬೆಳವಣಿಗೆಗಾಗಿ ಸರಾಗವಾಗಿ ನೀರು ಹರಿದು ಹೋಗುವಂತೆ ಬಸಿಕಾಲುವೆಗಳ ವ್ಯವಸ್ಥೆ ಮಾಡುವಂತಹದ್ದು ಅತ್ಯವಶ್ಯಕ.

5. ಅಸಮರ್ಪಕ ಪರಾಗ ಸ್ಪರ್ಶ ಕ್ರಿಯೆ

ಪರಾಗಸ್ಪರ್ಶ ಕ್ರಿಯೆ ಸಮರ್ಪಕವಾಗಿ ಆಗದೇ ಇದ್ದಲ್ಲಿ ಸಹ ಮಿಡಿಗಾಯಿ ಉದುರುವಿಕೆಯನ್ನು ಕಾಣಬಹುದು. ಜೇನು ನೊಣಗಳು ಪರಾಗ ಸ್ಪರ್ಶ ಕ್ರಿಯೆಯಲ್ಲಿ ಹೆಚ್ಚು ಸಹಕಾರಿಯಾಗಿರುವದರಿಂದ ಒಂದು ಎಕರೆ ತೆಂಗಿನ ತೋಟದಲ್ಲಿ 4-6 ಜೇನು ಗೂಡುಗಳನ್ನು ಇಡುವುದರಿಂದ ಪರಾಗಸ್ಪರ್ಶ ಕ್ರಿಯೆ ಸುಗಮವಾಗುತ್ತದೆ ಹಾಗೂ ಇಳುವರಿ ಹೆಚ್ಚಿಸುವಲ್ಲಿ ಸಹಕರಿಸುತ್ತದೆ.

6. ಬೆಳೆ ನಿಯಂತ್ರಕಗಳು

ಬೆಳೆ ನಿಯಂತ್ರಕಗಳು ಪರಾಗಸ್ಪರ್ಶ ಕ್ರಿಯೆಗೊಂಡ ಹೆಣ್ಣು ಹೂಗಳು ಕಾಯಿಗಳಾಗಿ ಬೆಳೆಯುವುದಕ್ಕೆ ಅವಶ್ಯಕವಾಗಿದ್ದು, ಕೆಲವೊಂದು ತೆಂಗಿನ ಗಿಡಗಳಲ್ಲಿ ಇವುಗಳ ಉತ್ಪಾದನೆ ಕಡಿಮೆ ಇರುತ್ತದೆ. ಒಂದು ಮಿ.ಲಿ. ನ್ಯಾಫ್ತಲಿನ್ ಅಸಿಟಿಕ್ ಆಮ್ಲ (ಪ್ಲಾನೋಫಿಕ್ಸ್) ಎನ್ನುವ ಬೆಳೆ ನಿಯಂತ್ರಕವನ್ನು 2 ಲೀಟರ್ ನೀರಿನಲ್ಲಿ ಬೆರೆಸಿ ಹೂ ಗೊಂಚಲು ತೆರೆದ 30 ದಿವಸಗಳ ನಂತರ ಸಿಂಪರಣೆ ಮಾಡುವುದರಿಂದ ಮಿಡಿಗಾಯಿ ಉದುರುವುದನ್ನು ತಡೆಗಟ್ಟಬಹುದು. ಈ ದ್ರಾವಣದ ಸಿಂಪರಣೆಯಿಂದ ಕಾಯಿ ಕಟ್ಟುವಿಕೆಯಲ್ಲಿ ಶೇಕಡಾ 10 ರಷ್ಟು ವೃದ್ಧಿಯನ್ನು ಕಾಣಬಹುದು.

7. ಕೀಟಗಳ ಬಾಧೆ

ರಸ ಹೀರುವ ಕೀಟಗಳಾದ ಕಪ್ಪು ತಿಗಣೆ, ಹಿಟ್ಟು ತಿಗಣೆ ಮತ್ತು ನುಸಿಗಳು ತೆಂಗಿನ ಕಾಯಿಗಳ ಗೊಂಚಲುಗಳ ಮೇಲೆ ಬಾಧೆ ಮಾಡುವುದರಿಂದ ಹೆಚ್ಚಿನ ಮಿಡಿಗಾಯಿ ಉದುರುವುದು ಕಂಡು ಬಂದಿದೆ. ಇತ್ತಿತ್ತಲಾಗಿ ಕಾಣಿಸಿಕೊಂಡ ನುಸಿ ಬಾಧೆಯಿಂದ ಮಿಡಿಗಾಯಿಗಳು ಉದುರಿ ತೆಂಗಿನ ಇಳುವರಿಯಲ್ಲಿ ಹೆಚ್ಚಿನ ಇಳಿಮುಖ ಕಂಡು ಬಂದಿದೆ.

ಈ ಕೀಟಗಳ ಹತೋಟಿಗಾಗಿ ಈ ಕೆಳಗಿನ ಕ್ರಮಗಳನ್ನು ಅನುಸರಿಸಬೇಕು.

ಅ. ಬೇವಿನ ಎಣ್ಣೆ, ಬೆಳ್ಳುಳ್ಳಿ ಮತ್ತು ಸಾಬೂನಿನ ಮಿಶ್ರಣವನ್ನು ಶೇ. 2 ರಂತೆ ಬಾಧೆಗೊಳಗಾದ ಮರಗಳಲ್ಲಿನ ಕಾಯಿಗಳಿಗೆ ಸಿಂಪರಣೆ ಮಾಡುವುದು.

ಆ. ಬೇವು ಆಧಾರಿತ ಕೀಟನಾಶಕವನ್ನು ಒಂದು ಲೀಟರ್ ನೀರಿನಲ್ಲಿ 4 ಮಿ.ಲೀ. ನಂತೆ ಸಿಂಪರಣೆ ಅಥವಾ ಒಂದು

ಮರಕ್ಕೆ 7.5 ಮಿ.ಲೀ. ಅಥವಾ 10 ಮಿ.ಲೀ. ಅಷ್ಟೇ ಪ್ರಮಾಣದ ನೀರಿನಲ್ಲಿ ಮಿಶ್ರಣ ಮಾಡಿ, ಬೇರಿಗೆ ಕಟ್ಟುವುದು ಅಥವಾ ಬರಿ ಔಷಧಿಯನ್ನು ಕಾಂಡಕ್ಕೆ ಸಿರಿಂಜ್ ಮೂಲಕ ಕೊಡುವುದು ಸೂಕ್ತ.

ಇ. ನೀರಿನಲ್ಲಿ ಕರಗುವ ಗಂಧಕ 5 ಗ್ರಾಂ ನಂತೆ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಅಥವಾ ಡೈಕೊಫಾಲ್ 4 ಮಿ.ಲಿ. ನಂತೆ ಒಂದು ಲೀಟರ್ ನೀರಿನಲ್ಲಿ ಬೆರೆಸಿ, ಸಿಂಪಡಿಸುವುದರಿಂದ ನುಸಿ ಬಾಧೆಯನ್ನು ತಡೆಯಬಹುದು.

8. ರೋಗಗಳ ಬಾಧೆ

ಕೆಲವೊಂದು ಜಾತಿಯ ರೋಗಾಣುಗಳು ಮಿಡಿಗಾಯಿ ಮತ್ತು ಚಿಕ್ಕ ಗಾತ್ರದ ಕಾಯಿ ಉದರುವಿಕೆಗೆ ಪ್ರಮುಖ ಕಾರಣಗಳಾಗಿರುತ್ತವೆ. ಈ ತರಹದ ಸ್ಥಿತಿ ಸಾಮಾನ್ಯವಾಗಿ ಮಳೆಗಾಲದಲ್ಲಿ ಕಂಡುಬರುತ್ತದೆ. ಶಿಲೀಂಧ್ರಗಳಾದ ಫೈಟೋಪ್ತರಾ, *ಕೊಲೆಟೋಟ್ರೈಕಮ್, ಬೊಟ್ರಿಯೋ ಡಿಪ್ಲೋಡಿಯಾ, ಥಿಯೋಬ್ರೊಮಾ, ಬೊಥ್ರಿಯೋಸ್ಪೈರಿಯಾ ರೋಡಿನಾ,* ಪೆಸ್ಟಾಲೋಶಿಯಾಗಳು ತೆಂಗಿನ ಮಿಡಿಗಾಯಿ ಉದುರುವುದಕ್ಕೆ ಕಾರಣ ಎಂದು ಕಂಡು ಬಂದಿದೆ. ಒಂದರಿಂದ ನಾಲ್ಕು ತಿಂಗಳ ಪ್ರಾಯದ ಕಾಯಿಗಳು ಈ ಶಿಲೀಂಧ್ರಗಳ ಬಾಧೆಗೆ ಹೆಚ್ಚು ತುತ್ತಾಗುತ್ತವೆ. ಶೇಕಡಾ 0.2 ಸಾಮರ್ಥ್ಯದ ಮ್ಯಾಂಕೋಜೆಬ್ ಸಿಂಪರಣೆಯು ಕಾಯಿ ಉದುರುವುದನ್ನು ತಡೆಗಟ್ಟಲು ಸಹಾಯಕಾರಿಯಾಗಿದೆ.

ತೆಂಗಿನಲ್ಲಿ ಮಿಡಿಗಾಯಿ ಉದುರುವಿಕೆಗೆ ಅನೇಕ ಕಾರಣಗಳಿವೆ. ಪರಿಸ್ಥಿತಿಯನ್ನು ಅಭ್ಯಸಿಸಿ ನಿರ್ದಿಷ್ಟ ಕಾರಣಗಳನ್ನು ಕಂಡು ಹಿಡಿದು ಯೋಗ್ಯ ಹತೋಟಿ ಕ್ರಮಗಳನ್ನು ಕೈಕೊಂಡಲ್ಲಿ ಈ ಸಮಸ್ಯೆಗೆ ಪರಿಹಾರ ಸಾಧ್ಯವೆನ್ನಬಹುದು. ●

ಅ. ಮಹಮದ್ ಅಲಿ, ಎನ್. ಎಂ. ಸುನಿಲಕುಮಾರ್, ಆನಂದ ಜಿ. ಪಾಟೀಲ್ ಮತ್ತು ವಿ.ಐ. ಬೆಣಗಿ
ಕೃಷಿ ವಿಜ್ಞಾನ ಕೇಂದ್ರ, ಗುಲ್ಬರ್ಗಾ - 585 101

ಮೇವಿನ ಬೆಳೆಗಳು

ಪಶುಗಳಿಗೆ ಒದಗಿಸುವ ಒಟ್ಟು ಆಹಾರದಲ್ಲಿ ಶೇಕಡಾ 65-100 ರಷ್ಟು ಭಾಗ ಮೇವಾಗಿರುತ್ತದೆ. ಪಶುಗಳಿಗೆ ಪೂರೈಸುವ ಒಟ್ಟು ಮೇವಿನಲ್ಲಿ ಶೇಕಡಾ 25 ಭಾಗ ಒಳ್ಳೆಯ ದ್ವಿದಳ ಹಸಿರು ಮೇವಾಗಿದ್ದರೆ ಜಾನುವಾರುಗಳಿಗೆ ಸಮತೋಲನ ಆಹಾರ ಒದಗಿಸಿದಂತಾಗುತ್ತದೆ.

ಮೇವಿನ ಬೆಳೆಗಳಲ್ಲಿ ಮುಖ್ಯವಾಗಿ ಏಕದಳ ಮೇವಿನ ಬೆಳೆಗಳು ಹಾಗೂ ದ್ವಿದಳ ಮೇವಿನ ಬೆಳೆಗಳು ಎಂದು ವಿಂಗಡಿಸಬಹುದು.

ಏಕದಳ ಮೇವಿನ ಬೆಳೆಗಳಲ್ಲಿ ಏಕ ವಾರ್ಷಿಕ ಮೇವಿನ ಬೆಳೆಗಳಾದ ಮೇವಿನ ಗೋವಿನ ಜೋಳ (80-90 ದಿನಗಳು), ಮೇವಿನ ಜೋಳ (60-70 ದಿನಗಳು), ಮೇವಿನ ಸಜ್ಜೆ (60 ದಿನಗಳು) ಹಾಗೂ ಬಹು ವಾರ್ಷಿಕ ಮೇವಿನ ಬೆಳೆಗಳಲ್ಲಿ ಹೈಬ್ರಿಡ್ ನೇಪಿಯರ್ ಹುಲ್ಲು (45-60 ಕಟಾವಿನ ಅವಧಿ ದಿನಗಳು), ರೋಡ್ಸ್ ಹುಲ್ಲು (45 ಕಟಾವಿನ ಅವಧಿ ದಿನಗಳು), ಪ್ಯಾರಾ ಹುಲ್ಲು (35-45 ಕಟಾವಿನ ಅವಧಿ ದಿನಗಳು) ಇವುಗಳನ್ನು ಬೆಳೆಯಬಹುದಾಗಿದೆ.

ದ್ವಿದಳ ಮೇವಿನ ಬೆಳೆಗಳಲ್ಲಿ ಏಕ ವಾರ್ಷಿಕವಾಗಿ ಮೇವಿನ ಅಲಸಂದಿ (65-0 ದಿನಗಳು), ಮೇವಿನ ಹುರುಳಿ (65-70 ದಿನಗಳು) ಹಾಗೂ ಬಹು ವಾರ್ಷಿಕವಾಗಿ ಕುದುರೆ ಮೆಂತೆ (30-40 ಕಟಾವಿನ ಅವಧಿ) ಬೆಳೆಯಬಹುದು.

ಈ ಎಲ್ಲಾ ಮೇವಿನ ಬೆಳೆಗಳನ್ನು ಜೂನ್-ಜುಲೈ ತಿಂಗಳುಗಳಲ್ಲಿ ಬಿತ್ತನೆ ಮಾಡಬಹುದಾಗಿದೆ. ಕುದುರೆ ಮೆಂತೆಯನ್ನು ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಬಿತ್ತನೆ ಪ್ರಾರಂಭಿಸಬಹುದಾಗಿದೆ.